ಇ) ಇವರು ನಿರ್ದೇಶಕರಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಕನ್ನಡಿಗರನ್ನು ಆಚೆಗೆ ದೂಡಿ ಕೆ.ಜಿ.ಎಫ್. ನಿಂದ ತಮಿಳರನ್ನು ಕರೆಸಿಕೊಂಡು ನೇಮಿಸಿ ಕೊಂಡಿರುವುದು ನಿಜವೇ?

ಈ) ಈ ನೇಮಕಾತಿಗಳನ್ನು ಯಾವ ರೀತಿ ನಿಯಮಗಳ ಆಧಾರದ ಮೇಲೆ ಮಾಡಲಾಗಿದೆ.

ಉ) ಈ ಆಸ್ಪತ್ರೆಯಲ್ಲಿ ರೋಗಿಗಳಿಗೆ ಔಷಧಿಯ ಸೌಲಭ್ಯಗಳು ಇಲ್ಲದೆ ಇರುವುದನ್ನು ಸರ್ಕಾರವು ಗಮನಿಸಿದೆಯೇ?

ಊ) ಈ ನಿರ್ದೇಶಕರ ಒಪ್ಪಂದದ ಅವಧಿಯನ್ನು ಕೂಡಲೇ ರದ್ದುಪಡಿಸಿ ಅವರ ಜಾಗಕ್ಕೆ ನಿಷ್ಠಾವಂತ ಅಧಿಕಾರಿಯೊಬ್ಬರನ್ನು ನೇಮಕ ಮಾಡಲಾಗುವುದೇ?

ಋ) ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಡಾ|| ಆರ್.ಎ. ಪರಂಗುಸಾದಾಸ್

ಆ) ನಿಜವಲ್ಲ

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಇಲ್ಲಿಯವರೆಗೆ ರೋಗಿಗಳಿಗೆ ಔಷಧಿ ಸೌಲಭ್ಯಗಳು ದೊರಕದೆ ಇರುವ ನಿದರ್ಶನಗಳಿರುವುದಿಲ್ಲ. ಈ ಆಸ್ಪತ್ರೆಯಲ್ಲಿ ಇರಬೇಕಾದ ಮುಖ್ಯ ಔಷಧಿಗಳು ಯಾವಾಗಲೂ ದಾಸ್ತಾನಿನಲ್ಲಿ ಇರುತ್ತದೆ.

ಊ) ಈ ಬಗ್ಗೆ ಪ್ರಸ್ತಾವನೆ ಏನೂ ಇರುವುದಿಲ್ಲ. ಇನ್ನೂ ಅವರ ನೇಮಕಾತಿ ಅವಧಿಯು ಮುಗಿದಿರುವುದಿಲ್ಲ.

**ಸುರತ್ಕಲ್ ಕ್ಷೇತ್ರದ ಮೂಡುಶೆಡ್ಡೆಯಲ್ಲಿರುವ ಹಿರಿಯ ಪ್ರಾಥಮಿಕ ಶಾಲೆ**

576 - ಶ್ರೀ ಕುಂಭ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) (ದಕ್ಷಿಣ ಕನ್ನಡ) ಮುಡುಶೆಡ್ಡೆಯಲ್ಲಿನ ಹಿರಿಯ ಪ್ರಾಥಮಿಕ ಶಾಲೆಯು ಮಾದರಿ ಹಿರಿಯ ಪ್ರಾಥಮಿಕ ಶಾಲೆಯಾಗಿ ಪರಿವರ್ತಿಸಿಕೊಳ್ಳಲು ಇರುವ ಎಲ್ಲಾ ಅರ್ಹತೆಗಳನ್ನು ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಅದನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸದೆ ಇರುವುದಕ್ಕೆ ಕಾರಣಗಳೇನು?

ಇ) ಮಾದರಿ ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಮಾಡಲು ಬೇಕಾಗಿರುವ ಅರ್ಹತೆಗಳೇನು?

ಈ) ಸದರಿ ಶಾಲೆಯನ್ನು ಮಾದರಿ ಹಿರಿಯ ಪ್ರಾಥಮಿಕ ಶಾಲೆಯನ್ನಾಗಿ ಪರಿವರ್ತಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) -ಇಲ್ಲ-

ಆ) 1992-93ನೇ ಸಾಲಿನಲ್ಲಿ ವಿಧಾನಸಭಾ ಕ್ಷೇತ್ರಕ್ಕೆ ಒಂದರಂತೆ ಕನ್ನಡ ಮಾದರಿ ಶಾಲೆಗಳನ್ನು ಸ್ಥಾಪಿಸುವ ಉದ್ದೇಶದಿಂದ ಈ ಶಾಲೆ ಬರುವ ಕ್ಷೇತ್ರದಲ್ಲಿಯೇ ಇರುವ

ಮೂಡುಗಡ್ಡೆ ಪಟ್ಟಣದಲ್ಲಿರುವ ಹಿರಿಯ ಪ್ರಾಥಮಿಕ ಶಾಲೆಯನ್ನು ಕನ್ನಡ ಮಾದರಿ ಶಾಲೆಯಾಗಿ ಪರಿವರ್ತಿಸಿದೆ. ಆದರೆ, ಮುಡುಶೆಡ್ಡೆಯಲ್ಲಿನ ಶಾಲೆಯ ಬಗ್ಗೆ ಪ್ರಸ್ತಾವನೆ ಇಲ್ಲದೇ ಇರುವುದರಿಂದ ಪರಿಗಣಿಸಿರುವುದಿಲ್ಲ.

ಇ) 1) ಮಾದರಿ ಶಾಲೆಯಾಗಿ ಪರಿವರ್ತನೆಗೊಳ್ಳುವ ಶಾಲೆಯೂ ಸಾಧ್ಯವಾದಷ್ಟು ಮಟ್ಟಿಗೆ ಕೇಂದ್ರ ಸ್ಥಳದಲ್ಲಿರಬೇಕು. ಮತ್ತು ಶಾಲೆಯು 1 ರಿಂದ 7ನೇ ತರಗತಿಗಳನ್ನು ಹೊಂದಿರಬೇಕು.

2) ಶಾಲೆಯನ್ನು ಆರಿಸುವಾಗ 8 ಮತ್ತು ಇನ್ನೂ ಹೆಚ್ಚಿನ ಶಿಕ್ಷಕರ ಹುದ್ದೆಗಳು ಮಂಜೂರಾಗಿರುವ ಶಾಲೆಗಳನ್ನು ಆರಿಸುವುದು.

3) ಶಾಲೆಯಲ್ಲಿ ಸಾಕಷ್ಟು ಕೊಠಡಿಗಳಿರಬೇಕು. ಮತ್ತು ಆಟದ ಮೈದಾನ, ನೀರಿನ ಸೌಕರ್ಯ, ಶೌಚಾಲಯ ಅನುಕೂಲತೆ, ಶಾಲಾ ತೋಟ ಅಭಿವೃದ್ಧಿ ಪಡಿಸಲು ಹಾಗೂ ಅಗತ್ಯವಿರುವ ಶಾಲಾ ಕೊಠಡಿಗಳನ್ನು ನಿರ್ಮಾಣ ಮಾಡಲು ಸಾಕಷ್ಟು ಸ್ಥಳಾವಕಾಶವಿರಬೇಕು.

ಈ) ಹಾಲಿ ಸರ್ಕಾರದ ನೀತಿಯಂತೆ ಪ್ರತಿಯೊಂದು ವಿಧಾನ ಸಭಾ ಕ್ಷೇತ್ರಕ್ಕೊಂದರಂತೆ ಮಾದರಿ ಪ್ರಾಥಮಿಕ ಶಾಲೆ ತೆರೆಯಲು ಅವಕಾಶವಿದೆ. ಆದರೆ, ಈಗಾಗಲೇ ಸದರಿ ಕ್ಷೇತ್ರದಲ್ಲಿ ಶಾಲೆ ತೆರೆದಿರುವುದರಿಂದ ಮತ್ತೊಂದು ಶಾಲೆ ತೆರೆಯಲು ಅವಕಾಶವಿರುವುದಿಲ್ಲ.

**ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಪ್ರಾಥಮಿಕ ಶಾಲೆ**

575 - ಶ್ರೀ ಕುಂಬ್ಳೆ ಸುಂದರ್‌ರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಬೆಂಗಳೂರು ನಗರದ ಪ್ರದೇಶದಲ್ಲಿನ ಸುದ್ದಗುಂಟೆ ಪಾಳ್ಯದಲ್ಲಿರುವ ಕ್ರೈಸ್ತ ಕನ್ನಡ ಮಾಧ್ಯಮದ ಪ್ರಾಥಮಿಕ ಶಾಲೆಗೆ ಸರ್ಕಾರದವರು ಎಂದು ಅನುಮತಿ ನೀಡಿದರು?*

*ಆ) ಈ ಶಾಲೆಗೆ ಸರ್ಕಾರದವರು ಅನುದಾನವನ್ನು ನೀಡುತ್ತಿರುವರೇ?*

*ಇ) ಹಾಗಿದ್ದಲ್ಲಿ ಕಾರಣಗಳೇನು?*

ಶ್ರೀ ಹೆಚ್.ಜಿ. ಗೋವಿಂದ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಈ ಶಾಲೆಯನ್ನು 1985-86ನೇ ಸಾಲಿನಿಂದ ಪ್ರಾರಂಭಿಸಲು ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರು ದಿನಾಂಕ: 21-3-1986 ರಂದು ಅನುಮತಿ ನೀಡಿರುತ್ತಾರೆ.

ಆ) -ಇಲ್ಲ-

ಇ) ಬೆಂಗಳೂರು ನಗರ ಜಿಲ್ಲೆಯಲ್ಲಿ ಸದರಿ ವೆಚ್ಚಕ್ಕೆ ಆಯವ್ಯಯದಲ್ಲಿ ಹಣದ ಕೊರತೆ ಇರುವುದರಿಂದ ಈ ಶಾಲೆಗೆ ಅನುದಾನವನ್ನು ಇನ್ನೂ ನೀಡಿರುವುದಿಲ್ಲ.

**ಹುಬ್ಬಳ್ಳಿ ನಗರದಲ್ಲಿ ಕಾಲೇಜು ಪ್ರವೇಶಕ್ಕೆ ವಂತಿಗೆ**

339 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಹುಬ್ಬಳ್ಳಿ ನಗರದಲ್ಲಿ ಈ ವರ್ಷ ಕಾಲೇಜು ಪ್ರದೇಶಕ್ಕೆ ಡೊನೇಷನ್ ಹಾವಳಿ ಮಿತಿ ಮೀರಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಆ) ಬಂದಿದ್ದರೆ, ಅದರ ನಿವಾರಣೆಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :